ಚಿಕ್ಕಪೇಟೆ ನ್ಯಾಯ ಬೆಲೆ ಅಂಗಡಿಗಳ ಬಗ್ಗೆ

೩೭೧. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದವರಿಂದ ನಡೆಸಲ್ಪಡುತ್ತಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ

ಆ) ಅವುಗಳಲ್ಲಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಇರುವ ನ್ಯಾಯಬೆಲೆ ಅಂಗಡಿಗಳು

ಇ) ಬೆಂಗಳೂರು ನಗರ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಗಳಲ್ಲಿ ೧೯೯೦-೯೧ನೇ ಸಾಲಿಗೆ ಹೊಸದಾಗಿ ಪ್ರಾರಂಭ ಮಾಡಲು ಉದ್ದೇಶಿಸಿರುವ ನ್ಯಾಯಬೆಲೆ ಅಂಗಡಿಗಳು

ಈ) ಈ ಹೊಸ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಉದ್ದೇಶಿಸಿರುವ ಸ್ಥಳಗಳು.

ಶ್ರೀ ಅಜೀಜ್ ಸೇತ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ೨೦೧.

ಆ) ೨

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿನ ಕೈಮಗ್ಗಗಳ ಸಂಖ್ಯೆಯ ಬಗ್ಗೆ

೩೮೧. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಸಣ್ಣ ಕೈಗಾರಿಕೆಗಳ ಉಪ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ೧೯೮೫ ಮತ್ತು ೧೯೮೯ರಲ್ಲಿ ರಾಜ್ಯದಲ್ಲಿ ಒಟ್ಟು ಕೈಮಗ್ಗಗಳ ಸಂಖ್ಯೆ ಎಷ್ಟು ?

೨) ಈ ಸಂಖ್ಯೆಯಲ್ಲಿ ಕಡಿಮೆಯಾಗಿದೆಯೇ ? ಹಾಗಿದ್ದರೆ, ಕಾರಣಗಳನ್ನು ತಿಳಿಸಿ ?

೩) ರಾಜ್ಯದ ಕೈಮಗ್ಗಗಳ ಅಭಿವೃದ್ಧಿಗೆ ರಾಜ್ಯವು ಕೈಗೊಂಡಿದ್ದ ಪ್ರೋತ್ಸಾಹಕ್ರಮಗಳು

ಶ್ರೀಮತಿ ಸಂಮಾ ವಸಂತ (ಸಣ್ಣ ಕೈಗಾರಿಕೆಗಳ ಉಪ ಸಚಿವೆಯರು).—

೧) ೧೯೮೫ರಲ್ಲಿ ೮೫.೨೫೨ ಕೈಮಗ್ಗಗಳು ೧೯೮೯ರಲ್ಲಿ ೭೭,೨೫೨ ಕೈಮಗ್ಗಗಳು

೨) ಆಗಿರುತ್ತದೆ.

೧. ವಿದ್ಯುತ್ ಮಗ್ಗಗಳು ಮತ್ತು ಗಿರಣಿಗಳು ಪ್ರಬಲಗೊಳ್ಳುತ್ತಿರುವುದು ಮತ್ತು ಕೈಮಗ್ಗ ನಮೂನೆಗಳನ್ನು ವಿದ್ಯುತ್ ಚಾಲಿತ ಮಗ್ಗಗಳು ಅಳವಡಿಸಿಕೊಳ್ಳುತ್ತಿರುವುದು.

೨. ಕೈಮಗ್ಗಗಳಲ್ಲಿ ಆದಾಯ ಕಡಿಮೆಯಾಗುತ್ತಿರುವುದು.

೩. ಕೈಮಗ್ಗಗಳಲ್ಲಿರುವ ತಾಂತ್ರಿಕತೆಯ ಕೊರತೆ

೪. ಉತ್ಪಾದನೆ ಕಡಿಮೆಯಾಗುತ್ತಿರುವುದು.

೫. ವಿದ್ಯುತ್ ಮಗ್ಗಗಳ ಉತ್ಪಾದನೆ ಬೆಲೆಗೆ ಹೋಲಿಸಿದಲ್ಲಿ ಕೈಮಗ್ಗಗಳ ಉತ್ಪಾದನೆ ಬೆಲೆ ಹೆಚ್ಚಾಗಿರುವುದು.

೩) ೧. ಭಾರತ ಸರ್ಕಾರವು ೨೨ ನಮೂನೆಗಳನ್ನು ಕೈಮಗ್ಗ ಉತ್ಪಾದನೆಗಾಗಿಯೇ ಕಾದಿರಿಸಲಾಗಿದೆ.

೨. ಕೈಮಗ್ಗಗಳನ್ನು ಆಧುನೀಕರಿಸುವ ಯೋಜನೆ

೩. ಕೈಮಗ್ಗ ನೇಕಾರರಿಗೆ ಸೂಕ್ತ ಕಾರ್ಯಾಗಾರವನ್ನು ಒದಗಿಸುವ ಯೋಜನೆ

೪. ಪ್ರತಿವರ್ಷವೂ ಅಭ್ಯರ್ಥಿಗಳನ್ನು ಸೇರಿಸುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹ್ಯಾಂಡ್‌ಲೂಂ ಟೆಕ್ನಾಲಜಿಗೆ ಕೈಮಗ್ಗ ಆಧುನೀಕರಣದ ಬಗ್ಗೆ ಹೆಚ್ಚಿನ ತಾಂತ್ರಿಕತೆಗಾಗಿ ಕಳುಹಿಸಲಾಗುತ್ತಿದೆ.